ಶ್ರೀ ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಇಲ್ಲಿಗೆ ಮುಗಿಯಿತು. ಮಾನ್ಯ ಚಂದ್ರೇಗೌಡರೆ ಲಿಖಿತದ ಮೂಲಕ ಉತ್ತರಿಸುವ ಪ್ರಶ್ನೆಯನ್ನು ಸಭೆಯ ಮುಂದೆ ಮಂಡಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಚಂದ್ರ ಚಂದ್ರಪ್ಪನವರಿಗೆ ಒಂದು ಅವಕಾಶ ಕೊಡಿ.

ಅಧ್ಯಕ್ಷರು: ನಾನು ಕರೆದಂಥ ಸಂದರ್ಭದಲ್ಲಿ ಮಾನ್ಯ ಚಂದ್ರಪ್ಪವರು ಇರಲಿಲ್ಲ ಆದ್ದರಿಂದ, ಈ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ. ದಯವಿಟ್ಟು ಕ್ಷಮಿಸಬೇಕು. ಅವರು ಬಂದಾಗೆಲ್ಲಾ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 25.3.2003 ರಂದು ಲಿಖಿತ ಮೂಲಕ ಉತ್ತರಿಸುವ 124 ಪ್ರಶ್ನೆಗಳ ಪೈಕಿ 90 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ. (ಅನುಬಂಧ-1)

ಅಧ್ಯಕ್ಷರು: ಮಂಡಿಸಲಾಯಿತು. ಮಾನ್ಯ ಚಂದ್ರಪ್ಪನವರಿಗೆ ಇನ್ನೊಂದು ದಿವಸ ಅವಕಾಶ ಕೊಡುತ್ತೇನೆಂದು ಪ್ರಾಮಿಸ್ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ವೇಳೆಯಲ್ಲಿ ಮಾನ್ಯ ಚಂದ್ರಪ್ಪನವರ ಪ್ರಶ್ನೆ ಬಂದಂಥ ಸಂದರ್ಭದಲ್ಲಿ ಅವರು ಒಂದೆರಡು ನಿಮಿಷ ಇಲ್ಲಿರಲಿಲ್ಲ. ಈಗ ಏನಾಗುತ್ತದೆ ಎಂದರೆ, ಈಗಾಗಲೇ ಆನ್ಸರ್‌ನ್ನು ಲೇ ಮಾಡಿದ್ದಾರೆ. ಆದ್ದರಿಂದ ಮತ್ತೊಮ್ಮೆ ಅವರು ಪ್ರಶ್ನೆ ಕೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ವಿಶೇಷವಾದದು ಎಂದು ಪರಿಗಣಿಸಿ ಅವರಿಗೆ ಅವಕಾಶ ಕೊಡಿ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆಗಾಗಿ ಈಗಾಗಲೇ ಒಂದು ಗಂಟೆ ತೆಗೆದುಕೊಂಡಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಈಗಾಗಲೇ ಒಂದು ಗಂಟೆ ಆಗಿದೆ ಎಂದು ಪೋಸ್ಟ್ ಪೋನ್ ಮಾಡುತ್ತಿದ್ದೀರಾ?

ಅಧ್ಯಕ್ಷರು: ಆ ರೀತಿ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಅವರು ಇರಲಿಲ್ಲವೆಂದು ತಾವು ಪೋಸ್ಟ್ ಮಾಡಿದ್ದೀರಿ.

ಅಧ್ಯಕ್ಷರು: ನಾನು ಕರೆದಾಗ ಅವರು ಇರಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ: ದಯವಿಟ್ಟು ವಿಶೇಷವಾದಂಥ ಸಂದರ್ಭದಲ್ಲಿ ಮಾನ್ಯ ಚಂದ್ರಪ್ಪನವರು ಪ್ರಶ್ನೆ ಕೇಳುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಎರಡು ನಿಮಿಷ ಮಾತ್ರ ಅವಕಾಶ ಕೊಡುತ್ತೇನೆ.

Sri D.B. Chandre Gowda:- you have said question hour is over. It has gone to the records. How can we go back?

ಶ್ರೀ ಎನ್. ಸಂಪಗಿ: ಚೌಕಾಸಿ ಮೇಲೆ ನಡೆಯುತ್ತಿದೆ ಎಂದು ಕಾಣುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ಪ್ರೊಸೀಜರ್ ಪ್ರಕಾರ ಈ ಸದನ ನಡೆಯಬೇಕಾಗುತ್ತದೆ.

ಅಧ್ಯಕ್ಷರು: ಮಾನ್ಯ ಚಂದ್ರಪ್ಪನವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ಕರೆದಂಥ ಸಂದರ್ಭದಲ್ಲಿ ತಾವು ಇಲ್ಲದೆ ಇದ್ದ ಕಾರಣ ಇಷ್ಟೊಂದು ಫಜೀತಿ ಆಯಿತು. You

must understand my difficulty also. ದಯವಿಟ್ಟು ನಿಮ್ಮ ಪ್ರಶ್ನೆಯನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿ. Question Hour is over.

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು ಮಂಡಿಸಲಾಯಿತು

ಅಧ್ಯಕ್ಷರು: ಮಂಡಿಸಲಾಯಿತು ದಿನಾಂಕ: 19.03.2003ರ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 14 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 116 ಪ್ರಶ್ನೆಗಳ ಪೈಕಿ 101 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ. (ಅನುಬಂಧ I)

2. ಸಭೆಯ ಮುಂದಿಡಲಾಗುವ ಕಾಗದ ಪತ್ರ

ಶ್ರೀ ಟಿ. ರಾಜಣ್ಣ: ಕಾರ್ಯದರ್ಶಿ (ವಿಧಾನ ಸಭೆ): ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ "ಕರ್ನಾಟಕ, ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2002ನ್ನು ಸಭೆಯ ಮುಂದಿಡುತ್ತೇನೆ. (ಅನುಬಂಧ -II)

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಅ) ವಿಷಯ: ಅಡಿಕೆ ಬೆಳೆಗಾರರ ಸಾಲಮರುಪಾವತಿ ಬಗ್ಗೆ

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಅತ್ಯಂತ ತುರ್ತಾದ ಒಂದು ವಿಚಾರವನ್ನು ಸಭೆಯ ಮುಂದೆ ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಪಟ್ಟಿದ್ದೇನೆ. ಅದೇನೆಂದರೆ, ಮಾರ್ಚ್ 31 ರೊಳಗೆ ಅಡಿಕೆ ಬೆಳೆಗಾರರು ತೆಗೆದುಕೊಂಡಿರತಕ್ಕಂಥ ಸಾಲವನ್ನು ಮರುಪಾವತಿ ಮಾಡಬೇಕಾಗುತ್ತದೆ. ಮಾರ್ಚ್ 31ರೊಳಗೆ ಸಾಲವನ್ನು ಮರುಪಾವತಿ ಮಾಡತಕ್ಕಂಥ ಸ್ಥಿತಿಯಲ್ಲಿ ಅಡಿಕೆ ಬೆಳೆಗಾರರು ಇಲ್ಲ.

ಅಧ್ಯಕ್ಷರು: ಮಾನ್ಯ ಮಂತ್ರಿಯವರು ಒಂದು ಪತ್ರವನ್ನು ಬರೆದು ಕಳುಹಿಸಿದ್ದಾರೆ. ಸದರಿ ವಿಷಯವನ್ನು ಮಧ್ಯಾಹ್ನ ಮೂರು ಗಂಟೆಗೆ ಪ್ರಸ್ತಾಪ ಮಾಡಬೇಕೆಂದು ಈ ಪತ್ರದ ಮೂಲಕ ಕೇಳಿಕೊಂಡಿದ್ದಾರೆ. ಏಕೆಂದರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ತಮಗೆ ಪತ್ರ ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು: ಪತ್ರ ಕಳುಹಿಸಿಕೊಟ್ಟಿದ್ದೀರಿ. ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ.

ಆ) ವಿಷಯ: ಮಾದಿಗರಿಗೆ ಮೀಸಲಾತಿ ಬಗ್ಗೆ

ಶ್ರೀ ಎ.ನಾರಾಯಣಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾದಿಗರ ಮೀಸಲಾತಿ ಕುರಿತು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ತಮಗೆ ಈಗಾಗಲೇ ಪತ್ರ ಕಳುಹಿಸಿಕೊಟ್ಟಿದ್ದೇನೆ. ಆದ್ದರಿಂದ ನನಗೆ ಅವಕಾಶ ಕೊಡಿ.

ಅಧ್ಯಕ್ಷರು: ಸದರಿ ವಿಷಯವನ್ನು ಅರ್ಧಗಂಟೆ ಕಾಲಾವಕಾಶ ಸಂದರ್ಭದಲ್ಲಿ ಆಲೋ ಮಾಡುತ್ತೇನೆ. ಈ ವಿಷಯವನ್ನು ನಾಳೆ ತೆಗೆದುಕೊಳ್ಳುತ್ತೇನೆ.